



ಸೂರ್ಯನ ತುಣುಕುಗಳನ್ನು ಅಪಹರಿಸಿ ತಲೆ ಕೆದರಿ
ನಿಂತಿರುವ ನಿನ್ನ ಸುಳಿಯಲ್ಲಿ ಸಿಲುಕುವುದೂ
ಒಂದು ಸುಖ ವೇದನೆ
ನನಗಿನ್ನೂ ನೆನಪಿದೆ
ಆ ನಿನ್ನ ಮೊಗ್ಗುಗಳ ಅರಳಿಸಿ ಒಳ ಪದರ ಸುಲಿದು
ಬೆರಳುಗಳ ಉಗುರಿಗೆ ಅಂಟಿಸಿ ಬೆದರಿಸುತ್ತಿದ್ದ ಘಳಿಗೆ

ಒಳಗಿದ್ದ ಕೇಸರ ಶಲಾಕಾಗ್ರಗಳ ಜೊತೆಗೆ ಆಡುತ್ತಿದ್ದ
ಒಂದಿಷ್ಟು ಕೋಳಿ ಕಾಳಗದಂತ
ಕೊಕ್ಕೆಯಾಟ
ಚೆಂಡು ಮುರಿದಾಗ ಸೋತ ಭಾವದೊಡನೆ ಎದೆಯೇರಿಸಿ
ನಿಲ್ಲುತ್ತಿದ್ದ ಮತ್ತೊಂದು ಕೊಕ್ಕೆ
ಈಗೆಲ್ಲ ಕೊಕ್ಕೆ ಕೋಲುಗಳಿಗೆ ಸ್ಥಾನವಿಲ್ಲ
ತರಹೇವಾರಿ ಲೋಹಗಳ ವಾರ್ ವೆಪನ್ಸ್ ಪ್ರತಿ
ಮನೆಯಲ್ಲೂ ಅಡಗಿ ಕುಳಿತಿವೆ

ನಾಲಿಗೆಯ ರಸಧಾನಿಗಳಲ್ಲಿ ನೀರೂರುತ್ತಿವೆ
ಆ ನಿನ್ನ ಬಿಳಿ ಗೀರಿನ ದಳಗಳ ಚಪ್ಪರಿಕೆಯನ್ನು ನೆನೆದು
ಒಗರು ಹುಳಿ ಸಿಹಿ ಎಲ್ಲವುಗಳ ಮಿಲನ
ಈಗೆಲ್ಲಿ ಆ ನಿನ್ನ ದಳಗಳು
ಫಿಜ್ಜಾ ಬರ್ಗರ್ ಚೀಜ್ ನ್ಯೂಡಲ್ಸ್ ಮತ್ತಿನ್ನೇನೋ

ಮೈನಾ ಗಿಳಿ ಕೋಗಿಲೆ ಹಕ್ಕಿಗಳ ಹಿಂಡು
ನಿನ್ನೆದೆ ಮೇಲೆ ಕುಳಿತು ನಡೆಸುತ್ತಿದ್ದ ಅನುರಾಗ ಸಂಭಾಷಣೆ
ಸರಸ ವಿರಸ ಎಲ್ಲವೂ ಸೊಗಸೇ
ಸೊಗಸಿಗೀಗ ನಾನಾರ್ಥಗಳು ಬಿಡು

ಇದ್ದು ಬಿಡು ಗುಲ್ ಮೊಹರ್ ನಂತೆ
ನೂರು ದಿನಗಳ ಬದುಕ ಮೂರೇ ದಿನದಲ್ಲಿ
ಅರಳಿಬಿಡು ಜಗತ್ತು ತನ್ನತ್ತ ನೋಡುವಂತೆ